## ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಸಿ ಸಿ. 176/2020

**ಸಿಡಬ್ಲೂ. 25 ಪಿಡಬ್ಲೂಃ 16**

| | |
|---|---|
| ಸಾಕ್ಷಿಯ ಹೆಸರು | ಸಿ ನರಸಿಂಹಯ್ಯ |
| ತಂದೆ ಹೆಸರು | ಲೇಟ್ ಚಿಕ್ಕಪ್ಪಯ್ಯ |
| ವಯಸ್ಸು | 65 ವರ್ಷ |
| ಉದ್ಯೋಗ | ನಿವೃತ್ತ ಡಿವೈ ಎಸ್ ಪಿ |
| ವಾಸ | ಕೆ ಬಿ ಹೊಸಹಳ್ಳಿ, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 12.11.2025**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ನಾನು ದಿಃ 04.07.2011 ರಿಂದ ದಿಃ 12.11.2011 ರವರೆಗೆ ಪಾಂಡವಪುರ ಪೋಲೀಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 04.07.2011 ರಂದು ಈ ಕೇಸಿನ ಕಡತವನ್ನು ಚಾಸಾ.23 ರವರಂದ ಪಡೆದುಕೊಂಡು ಮುಂದಿನ ತನಿಖೆ ನಡೆಸಿದೆನು. ಆರೋಪಿ ಮತ್ತು ಮಾಲನ್ನು ಪತ್ತೆ ಮಾಡಲು ಸಿಬ್ಬಂದಿಗಳನ್ನು ನೇಮಕ ಮಾಡಿದೆನು. ದಿಃ 12.10.2011 ರಂದು ಚಾಸಾ.24 ರವರು ಮೇಟಗಳ್ಳಿ ಠಾಣೆ ಪ್ರಕರಣ ಗುನ್ನೆ ಸಂಃ 122/2011 ರಲ್ಲಿ ದಸ್ತಗಿರಿ ಮಾಡಿದ್ದ ಆರೋಪಿ ಮತ್ತು ಮಾಲು ಮತ್ತು ದಾಖಲಾತಿಗಳನ್ನು ವರ್ಗವಣೆ ನೀಡಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಒಂದು ಲಕ್ಷ್ಮಿ ದೇವರ ಬೆಳ್ಳಿಯ ಮುಖವಾಡ ತೂಕ ಸುಮಾರು 50 ಗ್ರಾಂ, ಒಂದು ಜೊತೆ ಬನಿಳ್ಳಿ ದೀಪ ತೂಕ 40 ಟಗ್ರಾಂ, ತಲಾ 20 ಗ್ರಾಂ

ತೂಕವಿರುವ ಮೂರು ಜೊತೆ ಬೆಳ್ಳಿಯ ದೀಪಗಳು, ತಲಾ 30 ಗ್ರಾಂ ತೂಕ ಇರುವ ಎರಡು ಜೊತೆ ಬೆಳ್ಳಿ ದೀಪಗಳು, ತಲಾ 20 ಗ್ರಾಂ ತೂಕ ಇರುವ 10 ಕತ್ತಿನ ಚೈನುಗಳು, ತಲಾ 20 ಗ್ರಾಂ ತೂಕ ಇರುವ 5 ಬೆಳ್ಳಿಯ ಕಾಲು ಚೈನುಗಳು, ತಲಾ 25 ಗ್ರಾಂ ತೂಕ ಇರುವ 15 ಜೊತೆ ಬೆಳ್ಳಿಯ ಕಾಲು ಚೈನುಗಳು, ತಲಾ 30 ಗ್ರಾಂ ತೂಕ ಇರುವ ಎರಡು ಜೊತೆ ಬೆಳ್ಳಿಯ ಚೈನುಗಳು, ತಲಾ 25 ಗ್ರಾಂ ತೂಕ ಇರುವ 10 ಜೊತೆ ಬೆಳ್ಳಿಯ ಕಾಲು ಮುರಿಗಳು, ತಲಾ 30 ಗ್ರಾಂ ತೂಕ ಇರುವ 5 ಜೊತೆ ಬೆಳ್ಳಿಯ ಕಾಲುಮುರಿಗಳು, ತಲಾ 20 ಗ್ರಾಂ ತೂಕ ಇರುವ 3 ಜೊತೆ ಬೆಳ್ಳಿಯ ಬಟ್ಟಲುಗಳು, ತಲಾ 15 ಗ್ರಾಂ ತೂಕ ಇರುವ 5 ಜೊತೆ ಬೆಳ್ಳಿಯ ಬಟ್ಟಲುಗಳು, ತಲಾ 30 ಗ್ರಾಂ ತೂಕ ಇರುವ 2 ಜೊತೆ ಬೆಳ್ಳಿಯ ಬಟ್ಟಲುಗಳು, ತಲಾ 15 ಗ್ರಾಂ ತೂಕ ಇರುವ 4 ಜೊತೆ ಬೆಳ್ಳಿಯ ಬಟ್ಟಲುಗಳು. ಸದರಿ ಮಾಲುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು.

2. ದಿಃ 13.10.2011 ರಂದು 1 ರಿಂದ 3ನೇ ಆರೋಪಿಗಳು ಮೈಸೂರಿನ ಕಾರಾಗೃಹದಲ್ಲಿದ್ದು ಬಾಡಿ ವೆರೆಂಟನ್ನು ಹೊರಡಿಸಲು ಮಾನ್ಯ ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿದೆನು. ದಿಃ 18.10.2011 ರಂದು ಮಾನ್ಯ ನ್ಯಾಯಲಯ ಸ್ವತ್ತುಗಳನ್ನು ಅರ್ಜಿದಾರರ ಮಧ್ಯಂತರ ವಶಕ್ಕೆ ನೀಡಲು ಆದೇಶಿಸಿದ್ದು, ಆ ಆದೇಶದಂತೆ ಚಾಸಾ.1ರವರು ದಿಃ 18.10.2011 ರಂದು ಬಂದಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಸ್ವತ್ತು ಪಟ್ಟಿ ಸಂಃ 194/2011 ಕ್ರಮ ಸಂಃ 1 ರಿಂದ 14 ಮಾಲುಗಳನ್ನು

ಚಾಸಾ.1 ರವರ ಮಧ್ಯಂತರ ವಶಕ್ಕೆ ನೀಡಿ ಸ್ವೀಕೃತಿ ಪಡೆದುಕೊಂಡೆನು. ನಿಪಿ.3 ಮತ್ತು 4 ರಂತೆ ಫೋಟೋ ತೆಗೆಸಿದೆನು. ನಿಪಿ.3 ಮತ್ತು 4 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

3. ದಿಃ 25.10.2011 ರಂದು ತನಿಖೆ ಪೂರ್ಣಗೊಂಡಿದ್ದು ದೋಷಾರೋಪಣ ಪಟ್ಟಿಯನ್ನು ಆರೋಪಿಗಳ ವಿರುದ್ಧ ಸಲ್ಲಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು. 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

4. ಆರೋಪಿಗಳ ವಿರುದ್ಧ ನೀವು ಮತ್ತು ಮೇಟಗಳ್ಳಿ ಪೊಲೀಸರು ಸೇರಿಕೊಂಡು ಮಾಲುಗಳನ್ನು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಮಾಲುಗಳನ್ನು ಬಿಟ್ಟುಕೊಟ್ಟ ಬಗ್ಗೆ ಪೋಟೋ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಮಾಲು ಪತ್ತೆಗಾಗಿ ಸಿಬ್ಬಂದಿಗಳನ್ನು ನೀವು ನೇಮಕ ಮಾಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೂ ಮುದ್ದೆಮಾಲುಗಳಿಗೂ ಹಾಗೂ ಕೃತ್ಯಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕೋಸ್ಕರ ಸೃಷ್ಟಿಸಿರುವ ಪ್ರಕರಣ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).**

**ಸಾ.ಓ.ಹೇ.ಕೇ.ಸ.ಇ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.**